75 ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು ನಗರದಲ್ಲಿ ಕೈಗೊಂಡಿರುವ ವಿವಿಧ ಭಾಗಗಳಲ್ಲಿನ ಮೇಲು ಸೇತುವೆ ಹಾಗೂ ಅಂಡರ್ ಪಾಸ್ ಕಾಮಗಾರಿಗಳೆಷ್ಟು? (ವಿವರ ನೀಡುವುದು);

ಆ) ಈ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಯಾವ ಯಾವ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ;

ಈ) ಈ ಕಾಮಗಾರಿಗಳಿಗೆ ನೀಡಿದ್ದ ಕಾಲಾವಧಿ ಎಷ್ಟು (ವಿವರ ನೀಡುವುದು);

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಆ) ಇ) ಮತ್ತು ಈ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು ನಗರದಲ್ಲಿ ಕೈಗೊಂಡಿರುವ ವಿವಿಧ ಭಾಗಗಳಲ್ಲಿನ ಮೇಲು ಸೇತುವೆ ಹಾಗೂ ಅಂಡರ್ ಪಾಸ್ ಕಾಮಗಾರಿಗಳಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ	ಕಾಲಾವಧಿ	ಷರಾ
ಮೇಲುಸೇತುವೆಗಳು				
1	ಬಿ.ಡಿ.ಎ. ಜಂಕ್ಷನ್	357 ಲಕ್ಷಗಳು	120 ದಿವಸಗಳು	ಕಾಮಗಾರಿ ಪೂರ್ಣಗೊಂಡು ವಾಹನ ಸಂಚಾರಕ್ಕೆ ಮುಕ್ತಗೊಳಿಸ ಲಾಗುತ್ತದೆ
2	ಸಿ.ಬಿ.ಐ. ಜಂಕ್ಷನ್	609 ಲಕ್ಷಗಳು	150 ದಿವಸಗಳು	
3	ಸಂಜಯನಗರ ಜಂಕ್ಷನ್	407 ಲಕ್ಷಗಳು	150 ದಿವಸಗಳು	

ಕೆಳಸೇತುವೆಗಳು				
1	ಕಾವೇರಿ ಜಂಕ್ಷನ್	190 ಲಕ್ಷಗಳು	90 ದಿವಸಗಳು	ಕಾಮಗಾರಿ ಪೂರ್ಣಗೊಂಡು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತದೆ
2	ಆನಂದ ನಗರ ಜಂಕ್ಷನ್	155 ಲಕ್ಷಗಳು	90 ದಿವಸಗಳು	
3	ಕನ್ನಿಂಗ್ ಹ್ಯಾಮ್ ಜಂಕ್ಷನ್	132 ಲಕ್ಷಗಳು	90 ದಿವಸಗಳು	
4	ಮಹಾರಾಣೀಸ್ ಜಂಕ್ಷನ್	492 ಲಕ್ಷಗಳು	120 ದಿವಸಗಳು	
5	ಕೆ.ಆರ್.ಸರ್ಕಲ್ ಜಂಕ್ಷನ್	257 ಲಕ್ಷಗಳು	120 ದಿವಸಗಳು	
	ಡಾ॥ ರಾಜ್ ಕುಮಾರ್ ರಸ್ತೆಯಲ್ಲಿ			
6	ವಿವೇಕಾನಂದ ಕಾಲೇಜ್ ಜಂಕ್ಷನ್ ಅಂಡರ್‌ಪಾಸ್ ನಿರ್ಮಾಣ	771 ಲಕ್ಷಗಳು	120 ದಿವಸಗಳು	ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದ್ದು ಟೆಂಡರ್ ಅನುಮೋದನೆ ಹಂತದಲ್ಲಿರುತ್ತದೆ.
7	10ನೇ ಅಡ್ಡರಸ್ತೆ ಜಂಕ್ಷನ್ ಅಂಡರ್ ಪಾಸ್ ನಿರ್ಮಾಣ	1346.50 ಲಕ್ಷಗಳು	120 ದಿವಸಗಳು	
8	ಓಕಳಿಪುರಂ ಜಂಕ್ಷನ್	1052.4 ಲಕ್ಷಗಳು	120 ದಿವಸಗಳು	
	ಹೊಸೂರು ಲಸ್ಕರ್ ರಸ್ತೆಯಲ್ಲಿ			
9	ಕೇಂದ್ರೀಯ ಸದನ ಜಂಕ್ಷನ್ ಅಂಡರ್ ಪಾಸ್ ನಿರ್ಮಾಣ	575 ಲಕ್ಷಗಳು	120 ದಿವಸಗಳು	

10	ಹೊಸೂರು ಸರ್ಜಾಪುರ ರಸ್ತೆ ಜಂಕ್ಷನ್–ಅಂಡರ್ ಪಾಸ್ ನಿರ್ಮಾಣ	1108 ಲಕ್ಷಗಳು	120 ದಿವಸಗಳು	
11	ಮರಿಗೌಡ ರಸ್ತೆ ಜಂಕ್ಷನ್–ಅಂಡರ್ ಪಾಸ್	1085 ಲಕ್ಷಗಳು	120 ದಿವಸಗಳು	
12	ಫೋರಂ ಜಂಕ್ಷನ್ ಅಂಡರ್‌ಪಾಸ್	888.84 ಲಕ್ಷಗಳು	120 ದಿವಸಗಳು	

803 ಶ್ರೀ ಖಾದರ್ ಯು.ಟಿ.(ಮಂಗಳೂರು) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮೀನುಗಾರಿಕೆ ಅಭಿವೃದ್ಧಿ ನಿಗಮದಿಂದ ರಾಜ್ಯದಲ್ಲಿ ಎಷ್ಟು "ಹವಾ ನಿಯಂತ್ರಿತ ಮೀನು ಮಾರಾಟ" ಕೇಂದ್ರಗಳನ್ನು ಸ್ಥಾಪಿಸಲಾಗಿದೆ (ವಿವರ ನೀಡುವುದು);

ಆ) ಮಂಗಳೂರಿನಲ್ಲಿ ನೂತನವಾಗಿ ತೆರೆದ ಮಾರಾಟ ಕೇಂದ್ರಗಳಿಂದ ಸ್ಥಳೀಯ ಮೀನು ಮಾರಾಟಗಾರರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು;

ಈ) ಮಂಗಳೂರಿನಲ್ಲಿ ತೆರೆದ ಮಾರಾಟ ಕೇಂದ್ರಗಳನ್ನು ರದ್ದುಪಡಿಸಲಾಗುವುದೇ?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಮೂರು.